**ಸಿ. ಸಿ. ನಂ. 181/2017**

**ಸಿ ಡಬ್ಲ್ಯೂ: 7**

**ಪಿ ಡಬ್ಲ್ಯೂ: 7**

**ಸಾಕ್ಷಿಯು ದಿನಾಂಕ: 22-11-2025 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟಿ ಸವಾಲು: ಆರೋಪಿ ಪರ ಶ್ರೀ ಸಿ.ಪಿ.ವಾಯ್ ವಕೀಲರಿಂದ</u>**

ದಾಖಲೆಗಳನ್ನು ಆರಕ್ಷಕ ನೀರಿಕ್ಷಕರು ಪರಿಶೀಲಿಸಿರುತ್ತಾರೆ. ಸದರಿಯವರು ದಾಖಲೆಗಳನ್ನು ಪರಿಶೀಲಿಸಿ ನನಗೆ ಆದೇಶ ಮಾಡಿದ ನಂತರ ನಾನು ಪೋರ್ಟಲ್ ನಲ್ಲಿ ಮಾಹಿತಿಯನ್ನು ಅಪ್ ಲೋಡ್ ಮಾಡಿರುತ್ತೇನೆ ಅಂದರೆ ಸರಿ . ದಾಖಲೆಗಳಲ್ಲಿ ವ್ಯತ್ಯಾಸಗಳಿದ್ದಾಗ ಅವುಗಳನ್ನು ತಿರಸ್ಕರಿಸಲಾಗುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಆರಕ್ಷಕ ನೀರಿಕ್ಷಕರು ಆರೋಪಿ ದಾಖಲೆಗಳಲ್ಲಿನ ವ್ಯತ್ಯಾಸಗಳನ್ನು ತಿದ್ದುಪಡಿ ಮಾಡಿಕೊಳ್ಳುವುದಾಗಿ ತಿಳಿಸಿದ್ದರಿಂದ ಅನುಮೋದನೆ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತೇನೆ ಅಂದರೆ ಸರಿ . ದಾಖಲೆಗಳನ್ನು ತಿದ್ದುಪಡಿ ಮಾಡಿಕೊಂಡು ಬಂದ ನಂತರ ಅನುಮೋದನೆ ನೀಡುತ್ತೇನೆ ಎಂದು ಆರಕ್ಷಕ ನೀರಿಕ್ಷಕರು ಆರೋಪಿಗೆ ತಿಳಿಸಿರಲಿಲ್ಲ. ಆರೋಪಿ ದಾಖಲೆಗಳನ್ನು ಸರಿಮಾಡಿಕೊಂಡು ಬರುವಂತೆ ಆದೇಶಿಸಿ ಅನುಮೊದನೆ ನೀಡದೇ ಇದ್ದಿದ್ದರೆ ಯಾವುದೇ ತಪ್ಪು ಆಗುತ್ತಿರಲಿಲ್ಲ ಮತ್ತು ಆರಕ್ಷಕ ನೀರಿಕ್ಷಕರ ನಿಷ್ಕಾಳಜಿತನದಿಂದಲೇ ಪ್ರಕರಣದಲ್ಲಿನ ತಪ್ಪು ಆಗಿರುತ್ತದೆ ಅಂದರೆ ಸರಿಯಲ್ಲ.

ಪೋಲಿಸ್ ವರಿಷ್ಠಾಧಿಕಾರಿಗಳಿಗೆ ನೀಡಿದ ವರದಿಯಲ್ಲಿ ದಾಖಲೆಗಳಲ್ಲಿ ವ್ಯತ್ಯಾಸಗಳು ಇವೆ ಎಂದು ಆರಕ್ಷಕ ನೀರಿಕ್ಷಕರು ನಮೂದು ಮಾಡಿರುವುದಿಲ್ಲ. ದಾಖಲೆಯಲ್ಲಿ ವ್ಯತ್ಯಾಸಗಳಿದ್ದರೂ ಅನುಮೊದನೆ ಮಾಡಿದ್ದು ಆರಕ್ಷಕ ನೀರಿಕ್ಷಕರ ತಪ್ಪು ಅಂದರೆ ಸರಿ . ನಿಪಿ: **33** ರಲ್ಲಿ ದಾಖಲೆಗಳು ಸರಿ ಇವೆ ಮತ್ತು ಪಾಸ್

**ಸಿ. ಸಿ. ನಂ. 181/2017**

**ಸಿ ಡಬ್ಲ್ಯೂ: 7**

**ಪಿ ಡಬ್ಲ್ಯೂ: 7**

ಪೋರ್ಟ್ ನೀಡಲು ತಕರಾರುಗಳು ಇಲ್ಲ ಎಂಬಂತೆ ವರದಿ ಇದೆ ಅಂದರೆ ಸರಿ . ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.